## ಪೂನಂ ಚೆಲ್ಲಾಟ!



'ನಶಾ' ಚಿತ್ರದಲ್ಲಿ ಪ್ರಚೋದನಾಕಾರಿ ಉಡುಪುಗಳಲ್ಲಿ ಕಾಣಿಸಿಕೊಂಡು ಪಡ್ಡೆ ಹುಡುಗರ ಎದೆಯಲ್ಲಿ ಕಿಚ್ಚುಹಚ್ಚಿಸಿ ಭಾರೀ ಗೆಲುವಿನ ನಿರೀಕ್ಷೆಯಲ್ಲಿದ್ದ ನಟಿ ಪೂನಂ ಪಾಂಡೆಗೆ ಎದುರಾದದ್ದು ನಿರಾಸೆ. ತಂತ್ರಜ್ಞಾನ ಇಷ್ಟೊಂದು ಮುಂದುವರಿದ ಯುಗದಲ್ಲಿ ತನ್ನ ದೇಹಸಿರಿಯನ್ನು ನೋಡಲು ಜನ ಚಿತ್ರಮಂದಿರಕ್ಕೆ ಬರುತ್ತಾರೆ ಎಂದು ಪೂನಂ ನಿರೀಕ್ಷಿಸಿದ್ದೇ ತಪ್ಪು. 'ನಶಾ' ಚಿತ್ರ ತೋಪಾಗಿದೆ.

ಸಿನಿಮಾ ಸೋತ ಬಳಿಕ ಒಂದಷ್ಟು ಕಾಲ ಮಂಕಾಗಿದ್ದ ಪೂನಂ ಹಳೆ ಹಾದಿಗೆ ಮರಳಿದ್ದಾರೆ. ಇದರಲ್ಲಿ ತುಸು ವೇಷ ಬದಲಿಸಿದ್ದಾರೆ. ಸ್ನೇಹಿತೆಯರೊಟ್ಟಿಗೆ ನಡೆಸಿದ ಪಾರ್ಟಿಯೊಂದರಲ್ಲಿ ಪೂನಂ ಮಾಡಿದ ಅಶ್ಲೀಲ ಭಂಗಿಯ ನೃತ್ಯದ ತುಣುಕು ಆಕೆಯ ಟ್ವಿಟ್ಟರ್ ಖಾತೆಗೆ ತಳಕು ಹಾಕಿಕೊಂಡಿರುವುದು ಮಾತ್ರವಲ್ಲ, ಭಾರಿ ಸದ್ದು ಮಾಡುತ್ತಿದೆ. ಈ ಘಟನೆ ಪೂನಂ ಪಾಂಡೆಗೆ ಬಹಳ ಬೇಸರ ಉಂಟುಮಾಡಿದೆಯಂತೆ! ಹಾಗಂತ ಪದೇ ಪದೇ ಟ್ವೀಟ್ ಮಾಡುತ್ತಿದ್ದಾರೆ ಪೂನಂ!

ಅರೆಬೆತ್ತಲೆಯಾಗಿ ಪೂನಂ ಗೆಳತಿಯರೆದುರಿಗೆ ನರ್ತಿಸಿದ್ದು ಕ್ಯಾಮೆರಾದಲ್ಲಿ ದಾಖಲಾಗಿತ್ತು. ಅದನ್ನು ಸ್ವತಃ ಪೂನಂ ತಮ್ಮ ಪ್ರೊಫೈಲ್‌ಗೆ ಟ್ಯಾಗ್ ಮಾಡಿಕೊಂಡರೋ ಅಥವಾ ಗೆಳತಿಯರು ಮಾಡಿದ ಕೃತ್ಯವೋ ಗೊತ್ತಿಲ್ಲ. ಆದರೆ ಪೂನಂ, 'ಇಂಥ ಘಟನೆಗಳು ನೋವನ್ನುಂಟು ಮಾಡುತ್ತದೆ. ಎಲ್ಲರಂತೆ ನಾನೂ ಖಾಸಗಿಯಾಗಿ ಈ ರೀತಿ ಮಾಡಿದ್ದೆ. ಅದನ್ನು ಬಹಿರಂಗ ಪಡಿಸಿರುವುದು ಸರಿಯಲ್ಲ' ಎಂದು ಟ್ವಿಟ್ಟರ್‌ನಲ್ಲಿ ಹೇಳಿಕೊಂಡಿದ್ದಾರೆ.

ಒಂದೆರಡು ಬಾರಿ ಟ್ವೀಟ್ ಮಾಡಿ ಅಲವತ್ತುಕೊಂಡಿದ್ದರೆ ಆಕೆಯ ಮಾತಿನಲ್ಲಿ ಸತ್ಯವಿದೆ ಎಂದು ಒಪ್ಪಿಕೊಳ್ಳಬಹುದಿತ್ತೇನೋ. ವಿಡಿಯೊ ಟ್ಯಾಗ್‌ಅನ್ನು ಪ್ರದರ್ಶಿಸುತ್ತಲೇ ಪುನಃ ಟ್ವೀಟ್ ಮಾಡುತ್ತಿದ್ದಾರೆ. ಇದು ಸ್ವಯಂಪ್ರಚಾರದ ಹಪಾಹಪಿ ಎಂದು ಬಿ–ಟೌನ್ ನಗುತ್ತಿದೆ!

■ ಅಮಿ


